ಓ.ಎಸ್ ನಂ.113/2023
ಪಿ.ಡಬ್ಲ್ಯೂ-1 ಈರಣ್ಣ ತಂದೆ ಬಸಣ್ಣ

**(ಇಂದು ದಿನಾಂಕಃ 19-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಎಸ್ ಪಿ ವಕೀಲರಿಂದ.

ದಾವಾ ಆಸ್ತಿಯನ್ನು ಶಂಕರೆಪ್ಪರವರು ಒಬ್ಬರೆ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ತಂದೆ ಬಸಣ್ಣ ಮತ್ತು ಶಂಕರೆಪ್ಪ ಕೂಡಿ ಖರೀದಿ ಮಾಡಿರುವುದಾಗಿ ನಮ್ಮ ತಂದೆ ಹೇಳಿರುತ್ತಾರೆ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ೯ ಗುಂಟೆ ಜಮೀನನ್ನು ಶಂಕರರವರು ಬಿ. ಇ. ಓ ರವರಿಗೆ ನೀಡಿರುತ್ತಾರೆ ಎಂದರೆ ಸರಿ. ನಾನು ಸದರಿ ಬಿ ಇ ಓ ಅಥವಾ ಸರಕಾರವನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಶಂಕರರವರು ೧೯೮೦-೮೧ ರಲ್ಲಿ ದಾವಾ ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಅಂಬವ್ವರವರಿಂದ ಶಂಕರರವರು ನೋಂದಾಯಿತ ಖರೀದಿ ಪತ್ರದಡಿ ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸರಿ. ಓ ಎಸ್ ನಂಬರ ೧೧೯/೨೦೧೧ ರ ದಾವೆಯು ದಿನಾಂಕ 01-04-2014 ರಂದು ವಜಾಗೊಂಡಿದೆ ಎಂದರೆ ಸರಿ. ಸದರಿ ತೀರ್ಪಿನ ಮೇಲೆ ಹಾಕಲಾದ ಆರ್ ಎ ನಂಬರ ೧೪/೨೦೧೪ ಎಂಬ ಅಪೀಲು ಕೂಡಾ ದಿನಾಂಕ 16-03-2017 ರಂದು ವಜಾಗೊಂಡಿರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

೨. ೧ನೇ ಪ್ರತಿವಾದಿ ನನ್ನ ದೊಡ್ಡಪ್ಪನ ಮಗನಾಗಿರುತ್ತಾರೆ. ಸದರಿ ದಾವೆ ಮತ್ತು ಅಪೀಲುಗಳನ್ನು ೧ನೇ ಪ್ರತಿವಾದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ೧ನೇ ಪ್ರತಿವಾದಿ ಉಚ್ಚ ನ್ಯಾಯಾಲಯಕ್ಕೆ ಹಾಕಿದ ಮೇಲ್ಮನವಿ ಕೂಡಾ ವಜಾಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ಗುರಪ್ಪರವರಿಗೆ ಲಕ್ಷ್ಮಣ, ಬಸಣ್ಣ, ಶಂಕರ ಮತ್ತು ಶರಣಪ್ಪ ಎಂಬ ೪ ಜನ

ಮಕ್ಕಳು ಎಂದರೆ ಸರಿ. ೪ನೇ ಪ್ರತಿವಾದಿ ಶರಣಪ್ಪರವರ ಮಗನಾಗಿರುತ್ತಾರೆ ಎಂದರೆ ಸರಿ. ೩೦-೪೦ ವರ್ಷಗಳ ಹಿಂದೆ ಗುರಪ್ಪರವರ ಮಕ್ಕಳು ಪಾಲು ಮಾಡಿಕೊಂಡಿರುತ್ತಾರೆ ಮತ್ತು ನಮ್ಮ ತಂದೆ ಬಸಣ್ಣರವರು ದತ್ತಕ ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಮ್ಮನಾದ ೩ನೇ ವಾದಿ ಚಂದ್ರಕಾಂತ ಓ ಎಸ್ ನಂಬರ ೯೫/೨೦೧೭ ಎಂಬ ದಾವೆ ಹಾಕಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಕೂಡಾ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾವು ವಾದಿಗಳು ಮತ್ತು ೩ನೇ ಪ್ರತಿವಾದಿ ಎಲ್ಲರೂ ಒಂದೇ ಮನೆಯಲ್ಲಿ ವಾಸವಿರುತ್ತೇವೆ. ಮನೆಯಲ್ಲಿ ಬಂದ ವಿಚಾರಗಳನ್ನು ಮತ್ತು ಕೇಸನ್ನು ಎಲ್ಲರೂ ಕೂಡಿ ನೋಡಿಕೊಂಡು ಹೋಗುತ್ತೇವೆ ಎಂದರೆ ಸರಿ.

೩. ೧ನೇ ಪ್ರತಿವಾದಿ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ಹಾಕಿದ ಪಿ ಸಿ ನಂಬರ ೪/೨೦೨೧ ರಲ್ಲಿ ನಮ್ಮ ತಂದೆ ಬಸಣ್ಣರವರು ದತ್ತಕ ಹೋದ ಬಗ್ಗೆ ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಬಸಣ್ಣರವರು ದತ್ತಕ ಹೋಗಿದ್ದರಿಂದ ಚಿಣಮಗೇರಾ ಗ್ರಾಮದ ಸರ್ವೆ ನಂಬರ ೧೧ ರಲ್ಲಿ ೧೧ ಎಕರೆ ೮ ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ನಾವು ಖರೀದಿಸಿರುತ್ತೇವೆ ಎನ್ನುತ್ತಾರೆ. ಶಾಂತಾಬಾಯಿ ಮತ್ತು ನೀಲಮ್ಮರವರು ಬಸಣ್ಣರವರ ಮಕ್ಕಳಾಗಿರುತ್ತಾರೆ ಎಂದರೆ ಸರಿ. ನಮ್ಮ ತಂದೆ ಬಸಣ್ಣರವರು ೨೦೨೧ ರಲ್ಲಿ ಮೃತರಾಗಿರುತ್ತಾರೆ. ಓ ಎಸ್ ನಂಬರ ೧೯/೨೦೧೦ ರ ದಾವೆಯಲ್ಲಿ ನಮ್ಮ ತಂದೆ ಬಸಣ್ಣರವರು ತಾವು ದತ್ತಕ ಹೋದ ಕುರಿತು ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

೪. ಶಂಕರರವರು ೨೦೧೭ ರಲ್ಲಿ ಅವರಳ್ಳಿ ಗ್ರಾಮದಲ್ಲಿ ಮೃತರಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಚಿಣಮಗೇರಾ ಗ್ರಾಮದಲ್ಲಿ ನಮ್ಮ ಜೊತೆಗೆ ಇದ್ದು, ಅವರು ಅಲ್ಲಿಯೇ

ಮೃತರಾಗಿರುತ್ತಾರೆ ಎನ್ನುತ್ತಾರೆ. ಶಂಕರರವರನ್ನು ಸರ್ವೆ ನಂಬರ ೫೪ ರ ಅವರಳ್ಳಿ ಗ್ರಾಮದ ಜಮೀನಿನಲ್ಲಿ ಅಂತ್ಯಕ್ರಿಯೆ ಮಾಡಲಾಗಿದೆ ಎಂದರೆ ಸರಿಯಲ್ಲ. ಶಂಕರರವರನ್ನು ೪ನೇ ಪ್ರತಿವಾದಿ ಮಡಿವಾಳಪ್ಪರವರು ನೋಡಿಕೊಂಡಿದ್ದರಿಂದ ಶಂಕರರವರು ತಮ್ಮ ಖರೀದಿಸಿದ ಆಸ್ತಿಯನ್ನು ಮೃತ್ಯುಪತ್ರದ ಮೂಲಕ ೪ನೇ ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ೪ನೇ ಪ್ರತಿವಾದಿಗೆ ಶಂಕರರವರ ಆಸ್ತಿ ಹೋಗುತ್ತದೆ ಎಂದು ತಿಳಿದು, ವಾದಿಗಳಾದ ನಾವು ಮತ್ತು ೧ ರಿಂದ ೩ನೇ ಪ್ರತಿವಾದಿಗಳು ಸೇರಿಕೊಂಡು ೪ನೇ ಪ್ರತಿವಾದಿಯ ಮೇಲೆ ಸುಳ್ಳು ದಾವೆಗಳನ್ನು ಹಾಕುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ. ನಾನು ಈಗ ಒಂದು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಮುಖ್ಯ ವಿಚಾರಣೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.